






ಸಂಗ್ರಹಾಲಯದಲ್ಲಿ ಭಿನ್ನ ವಿಷಯಗಳನ್ನು ಒಳಗೊಂಡ ವಿವಿಧ ವಿಭಾಗಗಳಿವೆ. ಎರಡು ಅಂತಸ್ತಿನ ವಿಶಾಲವಾದ ಸಂಗ್ರಹಾಲಯದಲ್ಲಿ 150ಕ್ಕೂ ಅಧಿಕ ಕಲಾಕೃತಿಗಳಿವೆ. ಒಂದಕ್ಕಿಂತಲೂ ಸುಂದರ, ಭಿನ್ನ. ಈ ಎಲ್ಲ ಸುಂದರ ಕಲಾಕೃತಿಗಳನ್ನು ಕೊರಿಯಾ ಹಾಗೂ ಥಾಯ್ಲೆಂಡ್‌ನ 15 ಜನ ವೃತ್ತಿನಿರತ ಕಲಾವಿದರು ರಚಿಸಿದ್ದಾರೆ.

ಥಾಯ್ಲೆಂಡ್, ಕೊರಿಯಾ ದೇಶಗಳ ಪ್ರಮುಖ ಆಕರ್ಷಣೆಗಳೇ ಅಲ್ಲದೆ, ಸ್ಥಳೀಯವಾಗಿಯೂ ಪ್ರಮುಖವಾಗಿರುವ ವಿಷಯಗಳು ಚಿತ್ರಗಳ ವಸ್ತುಗಳಾಗಿವೆ. ಪ್ರತೀ ಕಲಾಕೃತಿಯೂ ತನ್ನ '3ಡಿ' ಪರಿಕಲ್ಪನೆಯಿಂದಾಗಿ ಪ್ರವಾಸಿಗರನ್ನು ಆಕರ್ಷಿಸುತ್ತದೆ.

ಗಾಜಿನ ಹಿಂಭಾಗ ನಗ್ನವಾಗಿ ನಿಂತ ಸುಂದರ ಯುವತಿಯ ಚಿತ್ರ, ತೋಟದಲ್ಲಿ ದುಡಿಯುತ್ತಿರುವ ಮಹಿಳೆಯರು, ಕಾಲಲ್ಲಿ ಮೀನನ್ನು ಹಿಡಿದು ವಿಶಾಲ ರೆಕ್ಕೆಯನ್ನು ಹರಡಿಕೊಂಡು ಕ್ಯಾನ್ವಾಸ್‌ನ ಫ್ರೇಮ್‌ನಿಂದ ಹೊರಗೆ ಹಾರಿಬರುವಂತೆ ಕಾಣುವ ಹದ್ದು, ನೀರಿನಿಂದ ನೋಡುಗರತ್ತ ಬರುತ್ತಿರುವಂತೆ ಕಾಣುವ ಬಿಳಿಹುಲಿ, ಫ್ರೇಮಿನಿಂದ ಕತ್ತು ಹೊರಹಾಕಿ ನೀರು ಕುಡಿಯುತ್ತಿರುವ ಜಿರಾಫೆ, ಹಿಮಪಾತದಲ್ಲಿ ಕುಳಿತ ಪೆಂಗ್ವಿನ್, ಕಾಡಿನಲ್ಲಿ ಅಡ್ಡಾಡುವ ಘೇಂಡಾಮೃಗ – ಒಂದೊಂದು ಚಿತ್ರವೂ ಕಲಾವಿದರ ಅದ್ಭುತ ಕಸುಬುದಾರಿಕೆ ಮತ್ತು ಸೃಜನಶೀಲತೆಗೆ ಹಿಡಿದಿರುವ ಕನ್ನಡಿ.

ಸಮುದ್ರದ ಹಿನ್ನೀರಿನಿಂದ ಆವೃತಗೊಂಡ ವೆನ್ನಿಸ್ ನಗರದ ಕಟ್ಟಡಗಳ ಮಧ್ಯದಲ್ಲಿ ದೋಣಿಯೊಂದನ್ನು ಇರಿಸಿದ್ದಾರೆ. ಅದರಲ್ಲಿ ಕುಳಿತು ವಿಹಾರಕ್ಕೆ ಹೋಗಲು ಸಾಧ್ಯವಿಲ್ಲ; ಆದರೆ ಫೋಟೊ ತೆಗೆಸಿಕೊಳ್ಳಬಹುದು. ಆ ಫೋಟೊ ನಾವು ನೀರಿನಲ್ಲಿ ವಿಹರಿಸುತ್ತಿರುವಂತೆ ಮೂಡಿಬರುತ್ತದೆ.

ಇಲ್ಲಿ ಕೆಲವು ವಿಶೇಷವಾದ ಚಿತ್ರಗಳಿವೆ. ಹೊಲದಲ್ಲಿ ಕೆಲಸ ಮಾಡಿ ದಣಿದ ಮಹಿಳೆಯ ಚಿತ್ರದ ಪಕ್ಕದಲ್ಲೇ ನೀರಿನ ಕೆಟಲ್ಸ್ ಚಿತ್ರ ಬಿಡಿಸಿದ್ದಾರೆ. ಪ್ರವಾಸಿಗರು ಕೆಟಲ್ ಹತ್ತಿರ ಹಸ್ತ ತಾಗಿಸಿದರೆ ದಣಿದ ಮಹಿಳೆಗೆ ನೀರು ಕೊಡುತ್ತಿರುವಂತೆ ಭಾಸವಾಗುತ್ತದೆ. ವಿಶ್ವಪ್ರಖ್ಯಾತ ಮೊನಾಲಿಸಾಳ ಚಿತ್ರ ಇಲ್ಲಿದ್ದು, ಅವಳ ಕಣ್ಣಿನ ಹುಬ್ಬಿಗೆ ತಾಕಿದಂತೆ ಬ್ರಷ್ ಚಿತ್ರ ಬಿಡಿಸಿದ್ದಾರೆ. ಬ್ರಷ್ ಹತ್ತಿರ ಬೆರಳುಗಳನ್ನಿಟ್ಟರೆ ಚಿತ್ರ ಬಿಡಿಸುತ್ತಿರುವಂತೆಯೇ ಕಾಣುತ್ತದೆ.

ಟೈಮ್ ಮ್ಯಾಗಜೀನ್‌ನ ಮುಖಪುಟದ ಹತ್ತಿರ ಹೋಗಿ ನಿಗದಿತ ಸ್ಥಳದಲ್ಲಿ ನಿಂತು ಛಾಯಾಚಿತ್ರ ತೆಗೆದುಕೊಂಡರೆ, ಫೋಟೊ ತೆಗೆಸಿಕೊಂಡವರ ಚಿತ್ರವೇ ಮುಖಪುಟದಲ್ಲಿ ಪ್ರಕಟವಾದಂತೆ ಭಾಸವಾಗುತ್ತದೆ. ಮತ್ತೊಂದು ವಿಶಾಲವಾದ ಕಲಾಕೃತಿಯಲ್ಲಿ – ಪಾಳುಬಿದ್ದ ದೇವಸ್ಥಾನದ ಪರಿಸರದಲ್ಲಿ ಬೃಹದಾಕಾರವಾಗಿ ಬೆಳೆದು ನಿಂತ ಗಿಡದ ಬೇರುಗಳು, ಅದರಲ್ಲಿ ಚಿತ್ರಿಸಿದ ಬುದ್ಧನ ಮುಖದ ಭಾವ ಬಹುವಾಗಿ ಆಕರ್ಷಿಸುತ್ತದೆ.

ಕೊಳದ ಪಕ್ಕದ ನವಿಲಿನ ಹತ್ತಿರ ಹೋಗಿ ನಿಂತರೆ ಅದನ್ನು ಹಿಡಿದುಕೊಂಡಂತೆ, ಡಾಲ್ಫಿನ್ ಚಿತ್ರದ ಪಕ್ಕದಲ್ಲಿ ನಿಂತುಕೊಂಡರೆ ಅದರೊಂದಿಗೆ ಮಾತನಾಡುತ್ತಿರುವಂತೆ ಭಾಸವಾಗುತ್ತದೆ. ಹೀಗೆ ಎಲ್ಲ ಚಿತ್ರಗಳ ಬಳಿಯೂ ಹೋಗಿ ನೋಡುವ, ಸ್ಪರ್ಶಿಸಿ ಆನಂದಿಸುವ ಅವಕಾಶವೂ ಇದೆ. ಇಲ್ಲಿನ ಚಿತ್ರಗಳನ್ನು 'ಪರ್‌ಫೆಕ್ಷನ್' ಮತ್ತು 'ಸ್ಪೆಸಿಫಿಕ್ ಟೆಕ್ನಿಕ್' ತಂತ್ರಗಾರಿಕೆಯಲ್ಲಿ ರಚಿಸಿರುವುದು ವಿಶೇಷ. ಆದರೆ, ಇಂಥ ವಿಶೇಷ ಚಿತ್ರಗಳ ಸೃಷ್ಟಿಕರ್ತರ ಹೆಸರು ಅಲ್ಲಿ ಕಾಣಸಿಗುವುದಿಲ್ಲ. ನೋಡುಗರ ಮೆಚ್ಚುಗೆ ಅನಾಮಿಕ ಕಲಾವಿದರಿಗೆ ಮೀಸಲಾಗುತ್ತದೆ. ●